# ಕ್ರಿಯಾಶೀಲ ಜೀವನಕ್ಕೆ ಭಗವದ್ಗೀತೆಯ ಸಂದೇಶ

ಸ್ವಾಮಿ ಜಗದಾತ್ಮಾನಂದ

### ಗೀತಾಮಾತೆ

"ನಿರಾಶೆಯು ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿರುವ ಸಂದರ್ಭದಲ್ಲಿ, ನಾನು ಏಕಾಕಿಯಾಗಿ ನನ್ನ ಅಂತರಂಗದಲ್ಲಿ ಭರವಸೆಯ ಒಂದು ಕಿರಣವನ್ನು ಕೂಡ ಕಾಣದಾಗ, ಶರಣಭಾವದಿಂದ ಭಗವದ್ಗೀತೆಯ ಕಡೆ ತಿರುಗುತ್ತೇನೆ. ಇಲ್ಲೊಂದು ಶ್ಲೋಕ ಅಲ್ಲೊಂದು ಶ್ಲೋಕ ಸ್ಮರಿಸಿಕೊಂಡಾಗ ದಾರುಣವಾದ ರುದ್ರ ಸನ್ನಿವೇಶಗಳಲ್ಲೂ – ನನ್ನ ಜೀವನ ಅಂಥ ಸನ್ನಿವೇಶಗಳಿಂದ ತುಂಬಿದೆ – ನನ್ನಲ್ಲಿ ಕಿರುನಗೆ ಮೂಡುತ್ತದೆ. ಆ ದಾರುಣ ಆಘಾತಗಳ ಕಲೆ ಅಳಿಸಿಹೋಗದ ಮಚ್ಚೆಯಾಗಿ ಉಳಿಯದಿರುವುದಕ್ಕೆ ನಾನು ಭಗವದ್ಗೀತೆಗೆ ಋಣಿ" ಈ ಮಾತನ್ನು ಹೇಳಿದವರು ಮಹಾತ್ಮ ಗಾಂಧೀಜಿ (Young India, 1925, pp: 1078-79). ಇನ್ನೊಂದೆಡೆ ಅವರೇ 'ತಾಯಿಯು ದುಃಖಿಸುವ ತನ್ನ ಮಗುವನ್ನು ಸಮಾಧಾನಪಡಿಸುವಂತೆ ಗೀತಾಮಾತೆ ನನ್ನನ್ನು ಸಮಾಧಾನಪಡಿಸುತ್ತಾಳೆ' ಎಂದೂ ಹೇಳಿದ್ದಾರೆ. ಇದೇ ರೀತಿಯಲ್ಲಿ, ಸಹಸ್ರಾರು ವರ್ಷಗಳ ಕಾಲ ಭಗವದ್ಗೀತೆಯ ಮಾರ್ಗದರ್ಶನದಿಂದ, ಅನೇಕಾನೇಕ ಜನರು ಶೋಕ, ಮೋಹ ಮತ್ತು ಅಜ್ಞಾನಗಳ ಕತ್ತಲೆಯಿಂದ ದೂರವಾಗಿ, ಆತ್ಮಸಾಕ್ಷಾತ್ಕಾರದ ಹಂಬಲದೊಂದಿಗೆ ನೈತಿಕ ಸಮುನ್ನತಿಯನ್ನೂ ಹೊಂದಿ, ಲೋಕಹಿತ ಕಾರ್ಯದಲ್ಲಿ ನಿರಂತರ ಯತ್ನಶೀಲರಾದರು ಎಂಬುದನ್ನು ನಾವು ಮರೆಯುವಂತಿಲ್ಲ.

### ಭಗವದ್ಗೀತೆ ಬೋಧಿಸುವ ಜೀವನಧರ್ಮರಹಸ್ಯ

"ಭಾರತೀಯರಿಗೆ ಮಾತ್ರವಲ್ಲ ಸಕಲ ಮಾನವರಿಗೂ ಶಾಶ್ವತವಾದ ವಿಶ್ವಧರ್ಮತತ್ತ್ವವನ್ನು ತೆರೆದಿಟ್ಟಿದೆ ಈ ಗ್ರಂಥ" ಎಂದು ಆಲ್ಡಸ್ ಹಕ್ಸ್‌ಲೀ ಹೇಳುತ್ತಾರೆ. ಜರ್ಮನಿಯ ಸಂಸ್ಕೃತ ವಿದ್ವಾಂಸ ಹಾಲಲ್ "ಭಗವದ್ಗೀತೆ ಎಲ್ಲ ಕಾಲದ ಎಲ್ಲ ಮತದವರಿಗೂ ಸ್ಫೂರ್ತಿದಾಯಕ" ಎಂದು ಘೋಷಿಸುತ್ತಾರೆ.

'ಅಧ್ಯಾತ್ಮ ಮತ್ತು ಅದರ ಮಹತ್ವದ ಅರಿವು ಇಲ್ಲದಿದ್ದರೆ ಕೇವಲ ಭೌತಜಗತ್ತಿನ ಜ್ಞಾನವು (ಮನುಷ್ಯ ಹೃದಯದ ದುರಾಸೆಯ ಬೆಂಕಿಗೆ ತುಪ್ಪವನ್ನು ಸುರಿದಂತೆ) ಸ್ವಾರ್ಥಪರಾಯಣರ ಕೈಯಲ್ಲಿ ಪರದ್ರವ್ಯವನ್ನು ಅಪಹರಿಸುವ ಆಯುಧ ಅಥವಾ ಶೋಷಣೆಯ ಉಪಕರಣವಾಗಿ ಪರಿಣಮಿಸುತ್ತದೆ. ಆಗ ವ್ಯಕ್ತಿಯೊಬ್ಬ ಇನ್ನೊಬ್ಬನನ್ನು ಶೋಷಣೆ ಮಾಡಿ ಬದುಕುವುದನ್ನು ಕಲಿಯುತ್ತಾನೆಯೇ ಹೊರತು ಪರಹಿತಕ್ಕಾಗಿ ತ್ಯಾಗ ಮತ್ತು ಸೇವೆಯ ಆದರ್ಶವನ್ನು ಅನುಸರಿಸಲಾರ' ಎಂದರು ಸ್ವಾಮಿ ವಿವೇಕಾನಂದರು.

ಜೀವನವಿಡೀ ಜಗತ್ತಿನ ಇತಿಹಾಸವನ್ನು ಆಳವಾಗಿ ಅಧ್ಯಯನಮಾಡಿ ಹತ್ತು ಸಂಪುಟಗಳ ಬೃಹದ್‌ಗ್ರಂಥವನ್ನು ಬರೆದು ವಿಖ್ಯಾತರಾದ ವಿಲ್ ಡ್ಯುರಾಂಟ್ **'ಇತಿಹಾಸದ ಪಾಠಗಳು'** ಎಂಬ ತಮ್ಮ ಸಾರಗ್ರಂಥದಲ್ಲಿ ಈ ಮಾತುಗಳನ್ನು ಬರೆದಿದ್ದಾರೆ: "ನಿಜವಾದ ಕ್ರಾಂತಿ ಎಂದರೆ ಮನುಷ್ಯನ ಮನಸ್ಸು ಉನ್ನತ ಜ್ಞಾನದಿಂದ ಬೆಳಗುವುದು ಮತ್ತು ಅವನಲ್ಲಿ ಚಾರಿತ್ರ್ಯ ಬಲಸಂವರ್ಧನೆಯಾಗುವುದು. ನಿಜವಾದ ಕ್ರಾಂತಿಕಾರಿಗಳೆಂದರೆ ಸಂತ ಮಹಾತ್ಮರು ಮತ್ತು ತತ್ತ್ವಜ್ಞರು."

ಪ್ರತಿಯೊಬ್ಬ ವ್ಯಕ್ತಿಯ ನೈಜಸ್ವರೂಪ ಹಾಗೂ ಆತನ ಅಂತರ್ಯದಲ್ಲಿರುವ ಶಕ್ತಿಯನ್ನು ಕುರಿತ ಸ್ಪಷ್ಟವಾದ ತಿಳುವಳಿಕೆಯನ್ನು ಎಲ್ಲರಲ್ಲೂ ಉಂಟುಮಾಡಲು ಸಾಧ್ಯವಾದರೆ ಮನುಷ್ಯ ಸಮಾಜದ ಉಜ್ವಲವಾದ ಪ್ರಗತಿ ಸಾಧ್ಯವಾಗುತ್ತದೆಂದು ಇಂದು ಪಶ್ಚಿಮ ದೇಶದ ಚಿಂತನಶೀಲರು ಹೇಳುತ್ತಾರೆ. ಈ ದಿಸೆಯಲ್ಲಿ ಸಮಸ್ತ ಮಾನವಜನಾಂಗವನ್ನು ಕಲ್ಯಾಣದ ಪಥದಲ್ಲಿ ಮುನ್ನಡೆಸಲು ಭಗವದ್ಗೀತೆಯಂಥ ಗ್ರಂಥ ಇನ್ನೊಂದಿಲ್ಲ ಎಂಬುದು ಅತಿಶಯೋಕ್ತಿಯಲ್ಲ. ಹೇಗೆ ವೈಜ್ಞಾನಿಕ ನಿಯಮಗಳು ಜಾತಿ ಮತ ಕುಲ ಗೋತ್ರ ಭೇದವಿಲ್ಲದೇ ಸಾರ್ವತ್ರಿಕವಾಗಿವೆಯೋ ಭಗವದ್ಗೀತೆ ಬೋಧಿಸುವ ಜೀವನಧರ್ಮರಹಸ್ಯವೂ ಕೂಡ ಜೀವ, ಜಗತ್ತು ಮತ್ತು ಜಗನ್ನಿಯಾಮಕ – ಇವುಗಳ ಯಥಾರ್ಥ ಸ್ವರೂಪ ಸಂಬಂಧಗಳ ನೈಜ ಆಧಾರದ ಮೇಲೆ ನಿಂತಿರುವುದರಿಂದ, **ಅಭ್ಯುದಯ** (ಐಹಿಕ ಸುಖ) ಮತ್ತು **ನಿಃಶ್ರೇಯಸ್ಸುಗಳ** (ಪಾರಮಾರ್ಥಿಕ ಮೋಕ್ಷ) ಆಕಾಂಕ್ಷಿಗಳು ಅದು ತೋರಿದ ದಾರಿಯಲ್ಲಿ ನಡೆಯಬೇಕಲ್ಲದೇ ಗತ್ಯಂತರವಿಲ್ಲ.

### ಆತ್ಮಶಕ್ತಿಯ ಪರಮವೈಭವ

ಅರ್ಜುನನು ಕಿಂಕರ್ತವ್ಯ ಮೂಢನಾಗಿ, ಆತಂಕದ ಪರಮಾವಧಿಯನ್ನು ತಲುಪಿ ಪಲಾಯನವಾದವನ್ನು ಪಠಿಸುತ್ತಿರುವಾಗ "ಈ ಕ್ಷುದ್ರವಾದ ಹೃದಯ ದೌರ್ಬಲ್ಯ ನಿನಗೆ ತರವಲ್ಲ, ದುರ್ಬಲನಾಗಬೇಡ, ನಿರ್ವೀರ್ಯನಾಗಬೇಡ, ಎದ್ದು ನಿಲ್ಲು, ನಿನ್ನ ಶಕ್ತಿಯನ್ನು ಪ್ರಕಟಿಸು" ಎನ್ನುತ್ತ ಎಲ್ಲ ದುಃಖಕ್ಕೆ ಮೂಲಕಾರಣವಾದ ಆತ್ಮನನ್ನು ಕುರಿತ ಅಜ್ಞಾನವನ್ನು ದೂರ ಮಾಡಲು ಭಗವಂತ ಆತ್ಮ–ಅನಾತ್ಮ ವಿವೇಕವನ್ನು ಮೊದಲು ಬೋಧಿಸುತ್ತಾನೆ. ಈ ವಿವೇಕದ ಹಿನ್ನೆಲೆಯಿಂದ ಸ್ವಧರ್ಮ ವಿವೇಕವನ್ನೂ ನಿಷ್ಕಾಮ ಕರ್ಮವಿವೇಕವನ್ನೂ ಚಿತ್ತಶುದ್ಧಿಯ ಮೂಲಕ ಪಡೆಯಬಹುದಾದ ಆತ್ಮ ಸಾಕ್ಷಾತ್ಕಾರದ ದಿವ್ಯಾನುಭೂತಿಯ ವೈಭವವನ್ನೂ ಸ್ಪಷ್ಟಮಾತುಗಳಲ್ಲಿ ತಿಳಿಸುತ್ತಾನೆ.

ಮನುಷ್ಯರು ಅನುಭವಿಸುವ ಎಲ್ಲ ವಿಧದ ದುಃಖಗಳಿಗೂ ದೇಹಾತ್ಮಬುದ್ಧಿಯೇ ಕಾರಣವೆಂಬುದು ಭಾರತೀಯ ಋಷಿಗಳು ಕಂಡುಹಿಡಿದ ಒಂದು ಪರಮ ಸತ್ಯ, ಆತ್ಮನ

ಅಮರತೆಯನ್ನು ಜಗತ್ತಿಗೆ ಪ್ರಥಮ ಬಾರಿಗೆ ಬೋಧಿಸಿದ ನಮ್ಮ ರಾಷ್ಟ್ರದಲ್ಲಿ ಈ ಆತ್ಮವಿದ್ಯೆಯ ಅನುಷ್ಠಾನದ ಪರಂಪರೆ, ಭಗವದಿಚ್ಛೆಯಿಂದ ಅಸಂಖ್ಯ ಸಂತ ಮಹಾತ್ಮರುಗಳ ಮೂಲಕ ಹರಿದು ಬಂದಿದೆ. ಹತ್ತೊಂಬತ್ತನೇ ಶತಮಾನದ ಅಂತ್ಯ ಭಾಗದಲ್ಲಿ ದೇಶ ಪರಾಧೀನವಾಗಿದ್ದಾಗ ನಮ್ಮ ಧರ್ಮ ಸಂಸ್ಕೃತಿಯ ಸತ್ವ ಮತ್ತು ಮಹತ್ವವನ್ನು ಅರಿಯದೇ ವಿದೇಶಿಯರೂ ವಿಧರ್ಮೀಯರೂ ಅದನ್ನು ಹೀನಾಯವಾಗಿ ಕಂಡು ಧಿಕ್ಕರಿಸುತ್ತಲೂ, ಭಾರತೀಯರು ವಿದೇಶಿಯರನ್ನು ಅನುಸರಿಸುತ್ತ ಅದನ್ನು ತಾವೂ ನಿಂದಿಸಲೂ ತೊಡಗಿದಾಗ ಸ್ವಾಮಿ ವಿವೇಕಾನಂದರು ದಿವ್ಯಪ್ರಭೆಯಂತೆ ಆತ್ಮಶಕ್ತಿಯ ಬೆಳಕನ್ನು ಬೆಳಗಿ, ಭಾರತೀಯರ ಆತ್ಮಗ್ಲಾನಿಯನ್ನು ದೂರ ಮಾಡಿದರು. ಅತ್ಯಂತ ಸತ್ವಪೂರ್ಣವಾದ ಸಿಡಿಲವಾಣಿಯಲ್ಲಿ ಶ್ರೀ ಕುವೆಂಪು ಹೇಳುವಂತೆ **'ಕುರಿಯದೊಡ್ಡಿಯ ಮುರಿದು ಸಿಂಹದ ಗುಹೆಯ ವಿರಚಿಸಿದ'** – ಆತ್ಮಶಕ್ತಿಯ ಪರಮವೈಭವವನ್ನು ಸಾರಿದರು:–

"ಪ್ರತಿಯೊಬ್ಬನಲ್ಲೂ ಅನಂತ ಪರಿಪೂರ್ಣತೆ ಇದೆ. ಅದು ವ್ಯಕ್ತಗೊಂಡಿಲ್ಲ ಅಷ್ಟೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪರಿಪೂರ್ಣ ಸಂತನಾಗುವ, ಋಷಿತ್ವಕ್ಕೇರುವ ಸಾಧ್ಯತೆಗಳಿವೆ. ಹಾಗೆಯೇ ಲೌಕಿಕ ಅನ್ವೇಷಣೆಗಳಲ್ಲಿ ತೊಡಗಿದರೆ ಅಲ್ಲೂ ಒಬ್ಬ ಮಹಾಪುರುಷನೆನಿಸುವ ಸಾಮರ್ಥ್ಯವಿದೆ. ಆದರೆ ಆ ಸಾಮರ್ಥ್ಯವೆಲ್ಲ ಸೂಕ್ಷ್ಮರೂಪದಲ್ಲಿದೆ, ಅಷ್ಟೆ."

"ತನ್ನ ಆಂತರ್ಯದಲ್ಲಿ ಅಪರಿಮಿತ ಶಕ್ತಿ ತುಂಬಿಕೊಂಡಿದೆ ಎಂಬುದು ಮಾನವನಿಗೆ ತಿಳಿದಿರಲಿ ತಿಳಿಯದಿರಲಿ ಅವನಲ್ಲಿ ಅನಂತ ಶಕ್ತಿ ಇರುವುದು ಸತ್ಯ. ಅವನಿಗೆ ಅದರ ಅರಿವು ಮೂಡುವುದೇ ತಡ ಆ ಶಕ್ತಿಯು ಹೊರಹೊಮ್ಮಲು ಆರಂಭವಾಗುತ್ತದೆ."

ಜಗತ್ತು ಈ ಮಹಾಸಂದೇಶವನ್ನು ಎಷ್ಟು ಬೇಗ ಅರ್ಥಮಾಡಿಕೊಳ್ಳುವುದೋ ಅಷ್ಟು ಬೇಗನೆ ಅದು ಉನ್ನತಿಯ ಪಥದಲ್ಲಿ ಮುನ್ನಡೆಯುವುದು.

**ಬಲ ಸಂವರ್ಧನೆಯ ಪಥ**

ಶಿಲೆಯ ಮೇಲೆ ಸೌಧ ನಿರ್ಮಾಣ ಮಾಡಿದರೆ ಅದು ಸ್ಥಾಯಿಯಾಗಿ ನಿಲ್ಲಬಲ್ಲದು. ಮರಳಿನ ಮೇಲೆ ಕಟ್ಟಿದ ಕಟ್ಟಡ ಬಹು ಬೇಗನೆ ಕುಸಿದು ಬೀಳುವುದು. ಮಾನವನ ವ್ಯಕ್ತಿತ್ವವು ಅವನ ಇಚ್ಛೆ, ಜ್ಞಾನ ಮತ್ತು ಕ್ರಿಯಾಶಕ್ತಿಗಳು ವ್ಯಕ್ತವಾಗುವ ವಿಧಾನವನ್ನನುಸರಿಸಿ ರೂಪಿತವಾಗುತ್ತವೆ. ಇದು ಅವನ ವ್ಯಕ್ತಿತ್ವದ ಹಿನ್ನೆಲೆಯಲ್ಲಿರುವ ಸಂಚಿತ ಸಂಸ್ಕಾರಬೀಜಗಳನ್ನೇ ಹೊಂದಿಕೊಂಡಿವೆ. ದೈವತ್ವ ಮತ್ತು ಅಪಾರ ಶಕ್ತಿ ಎಲ್ಲರಲ್ಲೂ ಸಮಾನವಾಗಿ ಅಡಗಿದ್ದರೂ ಎಲ್ಲರೂ ಅದನ್ನು ವ್ಯಕ್ತಗೊಳಿಸುವ ಸಾಧ್ಯತೆ ಇದ್ದರೂ ಹಾಗಾಗುತ್ತಿಲ್ಲ ಏಕೆ? ಎಂಬುದೀಗ ಪ್ರಶ್ನೆ.

ಮೊದಲನೇ ಕಾರಣ ಸ್ವರೂಪವನ್ನು ಕುರಿತ ಅಜ್ಞಾನ, ಅಶ್ರದ್ಧೆ; ಇನ್ನೊಂದು – ಮನುಷ್ಯರು ವಿಕಾಸದ ವಿವಿಧ ಹಂತಗಳಲ್ಲಿ ನಿಂತುಕೊಂಡಿದ್ದಾರೆ, ತ್ರಿಗುಣಗಳಿಂದ ಬಾಧಿತರಾಗಿದ್ದಾರೆ. ಸತ್ತ್ವರಜಸ್ತಮೋಗುಣಗಳ ಅಭಿವ್ಯಕ್ತಿ ಕಾಲ್ಪನಿಕ ಸಿದ್ಧಾಂತವಲ್ಲ. ಇವುಗಳನ್ನು ಅಲ್ಲಗಳೆಯಲಾಗದು. ಪ್ರತಿಯೊಬ್ಬನಲ್ಲೂ ಅದು ದಿನದ ಬೇರೆ ಬೇರೆ ಸಮಯದಲ್ಲಿ ವ್ಯಕ್ತವಾಗುವುದನ್ನು ಪ್ರತಿಯೊಬ್ಬರೂ ಪರಿಶೀಲಿಸಬಹುದು. ತಮಸ್ಸು ಹೆಚ್ಚಿದಾಗ ನಾವು ಸೋಮಾರಿಗಳಾಗುತ್ತೇವೆ. ಚಟುವಟಿಕೆ ಕಡಿಮೆಯಾಗುತ್ತದೆ. ಮಂಕು ಹಿಡಿದಂತಾಗುತ್ತದೆ. ಕೆಲವೊಮ್ಮೆ ಚಟುವಟಿಕೆ ಬಲವಾಗಿ ಉತ್ಸಾಹ ಉದ್ಯಮಶೀಲತೆ ಪುಟಿದೇಳುತ್ತವೆ. ಕೆಲವೊಮ್ಮೆ ಈ ಎರಡೂ ಶಕ್ತಿಗಳು ಸಮತೂಕದಲ್ಲಿ ಶಾಂತವಾಗಿ ನಿಲ್ಲುತ್ತದೆ. ಇದೇ ಸತ್ವ. ಶಾಂತಿ, ಮಾಧುರ್ಯ ಸಂಯಮ ತಾಳ್ಮೆ ಕ್ಷಮೆ ಅನುಕಂಪೆ – ಇವೇ ಮೊದಲಾದವುಗಳು ಈ ಸ್ಥಿತಿಯಲ್ಲಿ ಗೋಚರವಾಗುತ್ತವೆ. ಇನ್ನೊಂದು ಪ್ರಮುಖ ವಿಚಾರವೆಂದರೆ ಬೇರೆ ಬೇರೆ ವ್ಯಕ್ತಿಗಳಲ್ಲಿ, ಈ ಮೂರು ಶಕ್ತಿಗಳಲ್ಲಿ ಯಾವುದಾದರೂ ಒಂದು ಪ್ರಧಾನವಾಗಿದ್ದು, ಅದು ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಜಗತ್ತಿನ ಧರ್ಮಗ್ರಂಥಗಳಲ್ಲಿ ಭಗವದ್ಗೀತೆ ಮಾತ್ರ ಈ ತ್ರಿಗುಣಗಳ ಹೊಡೆತದಿಂದ ತಪ್ಪಿಸಿಕೊಳ್ಳುವ, ಚಾರಿತ್ರ್ಯ ಬಲ ಸಂವರ್ಧನೆಯ ಪಥವನ್ನು ಸತಾರ್ಕಿಕವಾಗಿ ತೋರಿಸಿಕೊಡುತ್ತದೆ.

**ನಾನು ಭಗವದ್ಗೀತೆ ಓದುವಾಗ ಭಗವಂತನು ಈ ಜಗತ್ತನ್ನು ಹೇಗೆ ಸೃಷ್ಟಿಸಿದ ಎಂಬ ಪ್ರಶ್ನೆಯನ್ನಷ್ಟೇ ನನಗೆ ನಾನು ಕೇಳಿಕೊಳ್ಳುತ್ತೇನೆ. ಆ ಸಮಯದಲ್ಲಿ ನನಗೆ ಮಿಕ್ಕ (ಪ್ರಾಪಂಚಿಕ) ಸಂಗತಿಗಳೆಲ್ಲ ಅನಗತ್ಯವಾದವುಗಳು ಎಂಬಂತೆ ತೋರಿಬರುತ್ತವೆ.**

*–ಆಲ್ಬರ್ಟ್ ಐನ್‌ಸ್ಟೈನ್*

ಎಂದೆಂದೂ ಬತ್ತಿ ಬರಿದಾಗದ ಉತ್ಸಾಹ ಉದ್ಯಮಶೀಲತೆ ಸಾಧ್ಯವಾಗಲು, ಕ್ರಿಯಾಶೀಲತೆಯು ಉನ್ನತಮಟ್ಟಕ್ಕೇರಲು, ಮನುಷ್ಯನು ತನ್ನನ್ನು ತಾನು ಕುಗ್ಗಿಸಿಕೊಳ್ಳುವ ಆತ್ಮನಿಂದೆಯನ್ನು ಮೊದಲು ಬಿಟ್ಟುಬಿಡಬೇಕು. ಯಾವ ಕ್ಷೇತ್ರದಲ್ಲಿ ದುಡಿಯುವವನೇ ಇರಲಿ, ಲೋಕದೃಷ್ಟಿಯಿಂದ ಎಂಥ ಕನಿಷ್ಠ ಕೆಲಸವನ್ನು ಮಾಡುವವನೇ ಇರಲಿ ಆತ ಅತ್ಯುತ್ತಮ ಸ್ಥಿತಿಯನ್ನು ಏರಲು ಸಾಧ್ಯ ಎಂಬುದನ್ನು ಮನಕ್ಕೆ ತಂದುಕೊಳ್ಳಲಿ ಎಂದು ಗೀತೆಯು ಮನುಜಕುಲಕ್ಕೆ ಉನ್ನತಿಯ ಪಥವನ್ನು ದಿಗ್ದರ್ಶಿಸುತ್ತದೆ.

ಹೀಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಜೀವಿಯ ಅಜ್ಞಾನವನ್ನು ಆಮೂಲಾಗ್ರ ಕಿತ್ತು ಹಾಕಿ, ಅವನಲ್ಲಿರುವ ದೈವೀಪ್ರಜ್ಞೆಯ ಅನಾವರಣವನ್ನು ಮಾಡಿಸುತ್ತಾನೆ. ಅದರ ಮೂಲಕ ಹೊರಹೊಮ್ಮುವ ಅನಂತ ಜ್ಞಾನ ಮತ್ತು ಸಾಧ್ಯತೆಗಳ ಪ್ರಕಾಶನದಿಂದ ಪರಿಪೂರ್ಣ ಕ್ರಿಯಾಶೀಲ ವ್ಯಕ್ತಿತ್ವ ಒಡಮೂಡುತ್ತದೆ. ▪